**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 29-10 -2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎಸ್ ಎಂ ಎಸ್ ವಕೀಲರವರಿಂದಃ

ನನ್ನ ತಾಯಿಯ ಹೆಸರು ಪುಟ್ಟತಾಯಮ್ಮ. ಸದರಿಯವರು ರೇಷ್ಮೆ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ. ನಾನು ಗೃಹಿಣಿ. ನನ್ನ ಗಂಡ ವ್ಯವಸಾಯ ಮಾಡುತ್ತಾರೆ. ನಾನು ನನ್ನ ಗಂಡನ ಮನೆಯಲ್ಲಿ ವಾಸಿಸುತ್ತಿದ್ದೇನೆ. ನನ್ನ ಗಂಡನ ಮನೆಯಲ್ಲಿ ನನ್ನ ಅತ್ತೆ, ನನ್ನ ಗಂಡ ಮತ್ತು ನಾನು ವಾಸಿಸುತ್ತಿದ್ದೆವೆ. ನನ್ನ ಗಂಡ ವ್ಯವಸಾಯ ಮಾಡುವ ಜಮೀನು 4 ವರೆ ಎಕರೆ ಇದ್ದು, ಸದರಿಯು ಅವರ ಅಜ್ಜಿ ತಾತಾ ನ ಹೆಸರಿನಲ್ಲಿದೆ.

ಆರೋಪಿಯು ನನ್ನ ಅಣ್ಣನ ಮೂಲಕ ಪರಿಚಯವಿದ್ದಾರೆ. ಆರೋಪಿಯವರು ಹೊಸಕೆರೆ ಗ್ರಾಮ ಪಂಚಾಯಿತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಾರೆ. ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸದರಿಯವರ ಹೆಂಡತಿ ಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆರೋಪಿಯ ಮದುವೆ ಮುಂಚೆಯೇ ಪರಿಚಯವಿದ್ದು, ಮದುವೆಯಾದ ನಂತರ ಮದುವೆಯಾಗಿದೆಂದಷ್ಟೆ ಗೊತ್ತು ಎನ್ನುತ್ತಾರೆ. ಪ್ರಕರಣ ದಾಖಲಿಸುವ ಪೂರ್ವದಲ್ಲಿ ಅಥವಾ ನಂತರದಲ್ಲಿ ಆರೋಪಿಯ ತಂದೆತಾಯಿ ಮತ್ತು ಕುಟುಂಬದವರ ಹೆಸರನ್ನು ತಿಳಿದುಕೊಂಡಿಲ್ಲ. ಆರೋಪಿಯವರಿಗೆ ನೋಟಿಸ್ ನೀಡಲು ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿರುತ್ತೇನೆ. ನೋಟಿಸ್ ನಲ್ಲಿ ಆರೋಪಿಯ ತಂದೆಯ ಹೆಸರನ್ನು ಏನೆಂದು ನಮೂದಿಸಲಾಗಿದೆ ಎಂದು ನಾನು ತಿಳಿದುಕೊಂಡಿಲ್ಲ. ನೋಟಿಸ್ ನಲ್ಲಿ ಆರೋಪಿಯ ತಂದೆಯ ಹೆಸರು ನಮೂದಿಸಿರುವುದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನಾನು ಸರಿಯಾಗಿ ನೋಡಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಭಾವ ನವೀನ ವಕೀಲರು ಆ ಬಗ್ಗೆ ನೋಡಿಕೊಳ್ಳುತ್ತಿದ್ದರು ಎನ್ನುತ್ತಾರೆ.

ಆರೋಪಿಯ ತಂದೆಯ ಹೆಸರು ಸಿಂಗ್ರಯ್ಯ ಎಂದರೆ ಈಗ ತಿಳಿಯಿತು ಎನ್ನುತ್ತಾರೆ. ಆ ಬಗ್ಗೆ ಆರೋಪಿಯ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿಯನ್ನು ತೋರಿಸಿದ್ದು ಸಾಕ್ಷಿಯು ಸಮ್ಮತಿಸಿದ್ದು ದೂರುದಾರರ ವಕೀಲರು ಜೆರಾಕ್ಸ್ ಪ್ರತಿಯಾಗಿರುವುದರಿಂದ ಗುರುತಿಸುವಂತಿಲ್ಲವೆಂದು ತಕರಾರು ಮಾಡಿದ್ದು, ಆದರೆ ಪಾಟೀಸವಾಲಿನಲ್ಲಿ ಜೆರಾಕ್ಸ್ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದಲ್ಲಿ ಗುರುತಿಸಲು ಅವಕಾಶವಿರುವುದರಿಂದ ತಕರಾರನ್ನು ತಳ್ಳಿ ಹಾಕಿ ನಿಡಿ-1 ಎಂದು ಗುರುತಿಸಲಾಯಿತು. ಆರೋಪಿಯವರು ದಿಃ20-01-2019 ರಂದು 4 ಲಕ್ಷ ಸಾಲ ಪಡೆದಿರುತ್ತಾರೆ. ಸಾಲ ಪಡೆದ ಸಂದರ್ಭದಲ್ಲಿ ಪರಿಚಯವಿದ್ದರಿಂದ ಯಾವುದೇ ದಾಖಲಾತಿ ಪಡೆದಿಲ್ಲ. ಚೆಕ್ ನ್ನು 06-08-2019 ರಂದು ನೀಡಿರುತ್ತಾರೆ. ಸದರಿ ಚೆಕ್ ವಿಜಯ್ ಬ್ಯಾಂಕ್ ದಾಗಿತ್ತು. ವಿಜಯ್ ಬ್ಯಾಂಕ್ ಏಪ್ರಿಲ್ -2019 ರಲ್ಲಿ ಬ್ಯಾಂಕ್ ಆಫ್ ಬರೋಡಾ ದೊಂದಿಗೆ ವಿಲೀನವಾಗಿತ್ತು ಎಂದರೆ ಸರಿ. ನಾನು ದಿಃ06-08-2019 ರಂದೇ ಚೆಕ್ ನ್ನು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ. ಬ್ಯಾಂಕ್ ಹಿಂಬರಹ ಯಾವಾಗ ನೀಡಿದ್ದಾರೆಂದು ದಿನಾಂಕ ನೆನಪಿಲ್ಲ. ಸದರಿ ಬ್ಯಾಂಕ್ ಹಿಂಬರಹ ಬಂದ ನಂತರ ನೋಟಿಸ್ ನೀಡಲು ತೊಂದರೆಯಿತ್ತೇ ಎಂದರೆ ಸಾಕ್ಷಿಯು ಆರೋಪಿಗೆ ಹೇಳಿದ್ದು, ಸ್ವಲ್ಪ ದಿನ ಸಮಯಾವಕಾಶ ನೀಡಿ ಎಂದು ಹೇಳಿದ್ದರು ಎನ್ನುತ್ತಾರೆ. ಮತ್ತೇ ಯಾವಾಗ ಚೆಕ್ ನ್ನು ಬ್ಯಾಂಕಿಗೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು 3 ಭಾರಿ ಹಾಜರುಪಡಿಸಿದ್ದೆವು ದಿನಾಂಕ ನೆನಪಿಲ್ಲ ಎನ್ನುತ್ತಾರೆ. ಕೊನೆಯ ಹಿಂಬರಹದಲ್ಲಿ ಏನು ಕಾರಣ ನೀಡಿ, ಹಿಂಬರಹ ನೀಡಿದ್ದಾರೆಂದರೆ ಸಾಕ್ಷಿಯು ಖಾತೆಯಲ್ಲಿ ಹಣ ಇಲ್ಲವೆಂದು ನೀಡಿದ್ದಾರೆ ಎನ್ನುತ್ತಾರೆ. ಬೇರೆ ಯಾವುದಾದರೂ ಕಾರಣ ನೀಡಿದ್ದಾರೆಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನೋಟಿಸ್ ಜಾರಿಯಾದ ನಂತರ ಆರೋಪಿಯು ನನ್ನ ಭಾವ ನವೀನ ರವರನ್ನು ಭೇಟಿ ಮಾಡಿದ್ದರು ಎಂದರೆ ಸರಿ. ಸದರಿ ನನ್ನ ಭಾವ ವಕೀಲರಾದ ನವೀನರವರು ಅಪಘಾತದಿಂದ ಮರಣ ಹೊಂದಿದ್ದಾರೆಂದರೆ ಸರಿ. ಆರೋಪಿಯು ಸದರಿ ನನ್ನ ಭಾವವನ್ನು ಭೇಟಿ ಮಾಡಿದಾಗ ಪ್ರಕರಣ ದಾಖಲಿಸುವುದಿಲ್ಲವೆಂದು ನೋಟಿಸ್ ನ ಫೀಜ್

ನ್ನು ಕೇಳಿದ್ದರು ಎಂದರೆ ಸರಿಯಲ್ಲ. ಸದರಿ ವೇಳೆಯಲ್ಲಿ ಆರೋಪಿಯಿಂದ ನನ್ನ ಭಾವ ನವೀನ ರವರಿಗೆ ಸುಮಾರು 30 ಸಾವಿರ ಫೋನ್ ಪೇ ಮೂಲಕ ವರ್ಗಾವಣೆಯಾಗಿದೆ ಎಂದರೆ ಸಾಕ್ಷಿಯು ಆರೋಪಿ ಹೋಗಿ ನನ್ನ ಭಾವನೊಂದಿಗೆ ಮಾತನಾಡಿರುವ ವಿಚಾರ ಗೊತ್ತು ಆದರೆ ಹಣ ನೀಡಿರುವ ವಿಚಾರ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ನನ್ನ ತಾಯಿ 2017 ರಲ್ಲಿ ಮನೆ ಕಟ್ಟಿಸಿರುತ್ತಾರೆ. ಸದರಿ ಮನೆ ಕಟ್ಟಿಸಲು ಬುನಾದಿ ಹಾಕಲು ಹಣ ಬೇಕೆಂದು ಆರೋಪಿಯನ್ನು ನನ್ನ ತಾಯಿ ಕೇಳಿದ್ದರು ಎಂದರೆ ಸರಿಯಲ್ಲ. ಸದರಿ ವೇಳೆಯಲ್ಲಿ ಆರೋಪಿಯವರು ತಮ್ಮ ಬಳಿ ಹಣವಿಲ್ಲವೆಂದು ಸುಮಿತ್ರಾ ಎಂಬುವವರ ಬಳಿ 2 ಲಕ್ಷ ಸಾಲ ಕೊಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸುವಿತ್ರಾ ನಮ್ಮ ಕುಟುಂಬಕ್ಕೆ ಪರಿಚಯಸ್ಥರು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಮ್ಮ ಕೊಟ್ಟು ಚೆಕ್ ಸಾಕಾಗುವುದಿಲ್ಲವೆಂದು ಆರೋಪಿಯ ಚೆಕ್ ನ್ನು ಸಹ ನನ್ನ ಅಮ್ಮನಿಗೆ ನೀಡಿದ ಸಾಲದ ಭದ್ರತೆಗಾಗಿ ಸುವಿತ್ರಾ ರವರು ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವ್ಯವಹಾರವೂ 2017 ರಲ್ಲಿ ಆಗಿದ್ದು, ಸದರಿ ವೇಳೆಯಲ್ಲಿ ವಿಜಯ್ ಬ್ಯಾಂಕ್ ಅಸ್ತಿತ್ವದಲ್ಲಿದ್ದರಿಂದ ನಿಪಿ-1 ರ ಚೆಕ್ ನ್ನು ಸದರಿ ಸುಮಿತ್ರಾ ರವರಿಗೆ ನೀಡಲಾಗಿತ್ತು ಎಂದರೆ ಸರಿಯಲ್ಲ. ನನ್ನ ತಾಯಿ ಸುವಿತ್ರಾರವರ ಸಾಲವನ್ನು ತೀರಿಸಿ ಆಕೆಯ ಮತ್ತು ಆರೋಪಿಯ ಚೆಕ್ ನ್ನು ಅವರೇ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ಸುರೇಶ್ ಎನ್ , ಮಂಡ್ಯ ಹೊಸಹಳ್ಳಿಯವರು ನನಗೆ ಗೊತ್ತಿಲ್ಲ. ಸದರಿಯವರು ನನ್ನ ತಾಯಿಯವರ ವಿರುದ್ಧ ಮಂಡ್ಯ ನ್ಯಾಯಾಲಯದಲ್ಲಿ ಚೆಕ್ ಬೋನ್ಸ್ ಪ್ರಕರಣ ದಾಖಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ನಾನು ನನ್ನ ತಾಯಿಯೊಂದಿಗೆ ಚೆನ್ನಾಗಿದ್ದೇನೆ. ಸದರಿಯವರು ತಮ್ಮ ಎಲ್ಲಾ ವ್ಯವಹಾರವನ್ನು ನನಗೆ ಹೇಳುತ್ತಾರೆಂದರೆ ಸರಿ. ಹೆಚ್ ಜಿ ನಳಿನಾ ಎಂಬುವವರು ನನ್ನ ತಾಯಿಯ ವಿರುದ್ಧ 4 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ ನಂಃ 235/2019 ರಂತೆ ಪ್ರಕರಣ

ದಾಖಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ಸಂಬಳವನ್ನು ಹೊರತುಪಡಿಸಿ, ನನ್ನ ತಾಯಿಯ ಕುಟುಂಬಕ್ಕೆ ಬೇರೆ ಯಾವುದೇ ಆದಾಯ ಇಲ್ಲ ಎಂದರೆ ಸರಿ. ಸದರಿ ನನ್ನ ತಾಯಿಯ ವಿರುದ್ಧವಿರುವ ಪ್ರಕರಣವನ್ನು ಇತ್ಯರ್ಥ ಪಡಿಸಿಕೊಡುವಂತೆ ಆರೋಪಿಯನ್ನು ಕೇಳಿದ್ದು ಸದರಿಯವರು ಒಪ್ಪದ ಕಾರಣ ಅವರ ಚೆಕ್ ನ್ನು ದುರ್ಬಳಕೆ ಮಾಡಿಕೊಂಡು ಪ್ರಕರಣ ದಾಖಲಿಸಿದ್ದೆವೆ ಎಂದರೆ ಸರಿಯಲ್ಲ. ಸದರಿ ಮಾತುಕತೆ ನನ್ನ ಸಮ್ಮುಖದಲ್ಲಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯವರಿಗೆ ಸಾಲ ನೀಡುವ ಆರ್ಥಿಕ ಸಾಮರ್ಥ್ಯ ನನಗೆ ಇಲ್ಲ ಮತ್ತು ಆರೋಪಿಯವರಿಗೆ ನನ್ನಿಂದ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಗಂಡ ವ್ಯವಸಾಯ ಮಾಡುವುದರಿಂದ ಸಾಕಷ್ಟು ಆದಾಯವಿದೆ ಎನ್ನುತ್ತಾರೆ. ಸಾಲದ ತಿರುವಳಿಯಾಗಿ ಚೆಕ್ ನೀಡಿರಲಿಲ್ಲ ಮತ್ತು ಅದನ್ನು ಬ್ಯಾಂಕ್ ನ್ನು ಹಾಜರುಪಡಿಸುವಂತೆ ಹೇಳಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ವಿರುದ್ಧ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಲು ಕಾದು ವಿಳಂಬವಾಗಿ 3 ಭಾರಿ ಚೆಕ್ ನ್ನು ಬ್ಯಾಂಕಿಗೆ ಹಾಜರುಪಡಿಸಿ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಧ್ಯವಾದಲ್ಲಿ ಆರೋಪಿಯಿಂದ ಹಣ ಕಬಳಿಸಬೇಕೆಂದು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು